**ಎನ್. ಪ್ರಕಾಶ್, ದೇವನಹಳ್ಳಿ**
ಎಲ್ಲಾ ವಸ್ತುಗಳ ಬೆಲೆಗಳು ವೇಗವಾಗಿ ಏರುತ್ತಿರುವ ಈ ಸಂದರ್ಭದಲ್ಲಿ ಸಾಮಾನ್ಯ ಜನತೆ ಏನು ಮಾಡಬೇಕು?



ಬುದ್ಧನಂತೆ ಆಸೆ ಬಿಟ್ಟು, ರೋಗಿಯಂತೆ ಊಟ ಬಿಟ್ಟು, ಧೂಳನ್ನು ತಿಂದು ಜೀರ್ಣಿಸಿಕೊಳ್ಳುವುದನ್ನು ಕಲಿಯಬೇಕು.

**ಎಸ್.ಜಿ. ರಾಜಶೇಖರರೆಡ್ಡಿ, ಗೌರಿಬಿದನೂರು**
ನೀವು ಕೇಳಿದಿರಿ ವಿಭಾಗಕ್ಕೆ ಬ್ರಹ್ಮಲಿಪಿಯಲ್ಲಿ ಪ್ರಶ್ನೆ ಕಳುಹಿಸಿದರೆ?
ಹಾಗಾದರೆ... ನೀವು ಈಗ ಬರೆದು ಕಳುಹಿಸಿರುವುದು ಆ ಲಿಪಿಯಲ್ಲವೇ?

**ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು**
ಪ್ರೇಮದ ಮೋಂಬತ್ತಿ ಸರಿಯಾಗಿ ಉರಿಯುವುದು ಯಾವಾಗ?



ಅವಿಶ್ವಾಸದ ಬಿರುಗಾಳಿ ಬೀಸದಿದ್ದಾಗ.

**ವಿ. ಹಮೀದ್, ವಿಟ್ಲ**
ನಿಸ್ವಾರ್ಥದಿಂದ ಮನುಷ್ಯ ಮಾಡುವ ಕಾರ್ಯ ಯಾವುದು?
ಟೀಕೆ!

**ಅಮರಯ್ಯ ಪತ್ರಿಮಠ, ಶೋರಾಪುರ**
ಇಂದಿನ ವಿದ್ಯಾರ್ಥಿಗಳು ಗುರುದಕ್ಷಿಣೆಯಾಗಿ ಏನನ್ನು ಕೊಡಬೇಕೆನ್ನುತ್ತೀರಾ?
ಸೆಂಡ್ ಆಫ್ ಪಾರ್ಟಿ!

**ಮಹಾವೀರ ಕಾಸಾರ, ಚನ್ನಗಿರಿ**
ಸೀತೆ ಶೋಕಾವಸ್ಥೆಯಲ್ಲಿ ಕಳೆದ ವನ ಅಶೋಕವನ ಹೇಗಾದೀತು?
ಸಕ್ಕರೆ ಡಯಾಬಿಟಿಸ್ ಇರುವವನ ಮುಂದಿದ್ದರೂ ಸಕ್ಕರೆಯೇ ಅಲ್ಲವೇ... ವಸ್ತುವೇ ಬೇರೆ, ವಾಸ್ತವವೇ ಬೇರೆ!

**ರವಿ ಪೈ, ಕಾಸರಗೋಡು**
ಶಿಸ್ತು, ಶಿಸ್ತು ಎನ್ನುವ ಪಕ್ಷ ಈಗ ಯಾವ ಸ್ಥಿತಿಯಲ್ಲಿದೆ?
ಸುಸ್ತು, ಸುಸ್ತು ಎನ್ನುವ ಸ್ಥಿತಿಯಲ್ಲಿ.

**ಆರ್. ಮಧುಸೂದನ್, ಹಾಸನ**
ಅಧಿಕಾರದಲ್ಲಿರುವ ಮುಖ್ಯಮಂತ್ರಿಯ ಮನೆಯ ಮೇಲೆ ಲೋಕಾಯುಕ್ತ ದಾಳಿ ನಡೆಸಿದರೆ ಏನು ಸಿಗಬಹುದು?
ಲೋಕಾಯುಕ್ತರಿಗೆ ಟ್ರಾನ್ಸ್‌ಫರ್ ಸಿಗಬಹುದು!

**ಮನೋರಮಾ ಪ್ರಭು, ಹೊನ್ನಾವರ**
ಮಾನವಂತರು ಮಾತ್ರ ಮಾನವರು; ಉಳಿದವರು?
ಸ್ವಯಂ ಸನ್ಮಾನವಂತರು!

**ಕೆ.ಎಸ್. ಕನಕಾಂಬ, ಶಂಕರಘಟ್ಟ**
ಯಾವಾಗಲೂ ಬೇರೆಯವರ ಅಡಿಗೆ-ತಿಂಡಿ ಹೊಗಳುವ ಗಂಡುಗಳಿಗೆ ಏನು ಹೇಳಬೇಕು?
ಸಿಹಿಕಹಿ ಚಂದ್ರುವಿನ ಹಿಂಬಾಲಕರು!

**ಎಚ್.ಆರ್. ದೇಸಾಯಿ, ರಾಯಚೂರು**
ಹೊರಗಣ್ಣು ಕಾಣದಾದಾಗ ಕನ್ನಡಕ, ಒಳಗಣ್ಣು ಕಾಣದಾದಾಗ?
ಜ್ಞಾನಿಗಳೆಂಬ ಕಾಂಟಾಕ್ಟ್ ಲೆನ್ಸ್‌ಗಳನ್ನು (ಆ)ಧರಿಸಿದರಾಯ್ತು!

**ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ**
ಬಯಸಿದ್ದೆಲ್ಲವೂ ಸಿಗುವಂತಿದ್ದರೆ?
ಯಾರೂ ಸಣ್ಣಪುಟ್ಟದ್ದನ್ನು ಬಯಸುತ್ತಿರಲಿಲ್ಲ!

**ವಿ.ಕೆ. ವಿಜಯಲಕ್ಷ್ಮಿ, ನಾಗರಬಾವಿ**
ದಿಕ್ಕಿಲ್ಲದವರಿಗೆ ದೇವರೇ ದಿಕ್ಕು. ದೇವರಿಗೆ?
ಭಕ್ತರ ಕೂಗೇ ದಿಕ್ಸೂಚಿ!

**ಪಿ.ಜೆ. ರಾಘವೇಂದ್ರ, ಮೈಸೂರು**
ಟೊಮ್ಯಾಟೋ, ಮೊಟ್ಟೆಗಳ ಬೆಲೆ ಹೆಚ್ಚಾದರೆ ರಾಜಕಾರಣಿಗಳು ಧೈರ್ಯದಿಂದ ಭಾಷಣ ಮಾಡಬಹುದಲ್ಲ?
ಜೆಲ್ಲಿಕಲ್ಲಿನ ಹಳೇ ಚಪ್ಪಲಿಯ ಬೆಲೆ ಇಳಿದಿದೆಯಂತಲ್ಲಾ ಸಾರ್...!

## ಬಹುಮಾನಿತ ಪ್ರಶ್ನೆ

**ಅಭಿಷೇಕ್ ಆರ್. ರೆಡ್ಡಿ, ಗೌರಿಬಿದನೂರು**
ಶಿವಣ್ಣ ಚಿನ್ನ ಕೊಳ್ಳಿ ಅಂತಾನೆ, ಪುನೀತ್ ಮಣಿಪ್ಪುರಂನಲ್ಲಿ ಚಿನ್ನ ಅಡವಿಡಿ ಅಂತಾನೆ; ಇಬ್ಬರಲ್ಲಿ ಯಾರು ಚಿನ್ನ...?
ಇಬ್ಬರೂ ಚಿನ್ನವೇ. ಶಿವಣ್ಣನಿಗೆ ಹೆಣ್ಣಿನ ಆಸೆ ಗೊತ್ತು, ಪುನೀತನಿಗೆ ಗಂಡಿನ ಕಷ್ಟ ಗೊತ್ತು!

**ಹೇಮಾ ಕಳಸಪ್ಪನವರ, ತೆಗ್ಗಿ**
ಮುತ್ತಿಗೂ, ಮತ್ತಿಗೂ ಏನು ವ್ಯತ್ಯಾಸ?
ಮುತ್ತಿನ ಮತ್ತು ಗಮ್ಮತ್ತು; ಮತ್ತಿನ ಮತ್ತು ಆಪತ್ತು!

**ಗೀತಾ ಬರ್ಲ, ಬೆಂಗಳೂರು**
ಪ್ರೀತಿ ಏಕೆ ಭೂಮಿ ಮೇಲಿದೆ?
ಹಾಗೇನಿಲ್ಲ, ಆಕಾಶದಲ್ಲೂ ಇದೆ. ಗಗನಸಖಿಯರಿಗೆ ಲೈನ್ ಹೊಡೆಯುವವರೂ ಇದ್ದಾರೆ.

**ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ**
ಅಮೃತಕ್ಕಿಂತ ಪವಿತ್ರವಾದುದು ಮತ್ಯಾವುದು ಸರ್?



ಮಾತೃವಿನ ಮಮತೆ.

**ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ**
ಪ್ರೀತಿಸಿದ ಹುಡುಗಿ ರಾಖಿ ಕಟ್ಟಿದರೆ ಏನು ಮಾಡಬೇಕು ರಾಮ್‌ಜೀ?
ರಾಂಗ್ ನಂಬರ್ ಎಂದು ತಿಳಿದಾಯಿತಲ್ಲಾ, ಬೇರೆ ನಂಬರ್‌ಗೆ ಡಯಲ್ ಮಾಡಿ!

**ಹಾಡ್ಯ ಜಯಾನಂದ, ಮೈಸೂರು**
ಇಲ್ಲೊಬ್ಬ ಅಜ್ಜಿಯನ್ನು ಅಜ್ಜಿ ಎಂದು ಕರೆದರೆ ರೇಗುತ್ತಾರಲ್ಲಾ...?
ಇದ್ದದ್ದು ಇದ್ದಂತೆ ಹೇಳಿದರೆ ಕೋಪ ಬಂದೇ ಬರುತ್ತದೆ; ಆಂಟಿಯ ಆಂಟಿ ಎಂದು ಕರೆಯಿರಿ, ನಗುತ್ತಾ ಸ್ವೀಕರಿಸುತ್ತಾರೆ!

■ ರಾಮ್